**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 21/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : ರೂಪಾ | ಪ್ರಮಾಣ ಮಾಡಿದ ದಿನಾಂಕ: | |
| ತಂದೆಯ ಹೆಸರು | : ಶ್ರೀನಿವಾಸ | **15.03.2023** | |
| ವಯಸ್ಸು | : **38** ವರ್ಷ | | |
| ವೃತ್ತಿ | : ಮನೆಗೆಲಸ | ಪಿಡಬ್ಲ್ಯೂ : | **11** |
| ವಾಸ ಸ್ಥಳ | : ಮೈಸೂರು | ಸಿಡಬ್ಲ್ಯೂ : | **18** |

*ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:*

ನ್ಯಾಯಾಲಯದೆದುರು ಹಾಜರಿರುವ ಆರೋಪಿ ಗೊತ್ತು. ಅವರು ನಮ್ಮ ಮನೆಯ ಪಕ್ಕದಲ್ಲಿ ಇರುತ್ತಾರೆ. ಮೃತ ಪವಿತ್ರಾಕುಮಾರಿ ಪರಿಚಯ ಇತ್ತು. ಅವರು ಸಹ ನಮ್ಮ ಮನೆಯ ಬಳಿ ವಾಸವಾಗಿದ್ದರು. ಆರೋಪಿ ಶಿಕ್ಷಕಿಯಾಗಿದ್ದಾರೆ. ಮೃತ ಪವಿತ್ರಾಕುಮಾರಿ ಮನೆಗೆಲಸ ಮಾಡುತ್ತಿದ್ದಳು. ಆರೋಪಿ ಮತ್ತು ಮೃತ ಪವಿತ್ರಾಕುಮಾರಿ ನಡುವೆ ಹಣಕಾಸಿನ ವ್ಯವಹಾರದ ಬಗ್ಗೆ ಗೊತ್ತಿಲ್ಲ ಮತ್ತು ಆ ಬಗ್ಗೆ ಜಗಳ ಆಗಿದ್ದು ನನಗೆ ಗೊತ್ತಿಲ್ಲ. ಆರೋಪಿಯು ಮೃತಳಿಗೆ ಹಣ ಕೊಡದಿದ್ದರೆ ಹೋಗಿ ಸಾಯಿ ಅಂತ ಪ್ರಚೋದನೆ ಮಾಡಿಲ್ಲ. ಈಗ ಸುಮಾರು 8 ವರ್ಷದ ಹಿಂದೆ ಮೃತ ಪವಿತ್ರಾಕುಮಾರಿ ವಿಷ ಕುಡಿದು ತನ್ನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಅಂತ ಗೊತ್ತಾಯಿತು. ಆದರೆ ಸಾವಿನ ಕಾರಣ ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಸಾಕ್ಷಿ ಮುಚ್ಚಳಿಕೆ ಮೇಲೆ ಇರುವ ರುಜು ನನ್ನದೇ ಇರುತ್ತದೆ. ಅದನ್ನು ನಿಪಿ-10 ಎಂದು ಸಾಕ್ಷಿ ರುಜವನ್ನು ನಿಪಿ-10(ಎ) ಎಂದ ಗುರುತಿಸಿದೆ.

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-*

**2.** ದಿನಾಂಕ **07.06.2015**ರಂದು ಸಂಜೆ **6** ಗಂಟೆ ಸಮಯದಲ್ಲಿ ಮೃತ ಪವಿತ್ರಾಕುಮಾರಿ ತನ್ನ ಮನೆಯ ಗೇಟ್ ಬಳಿ ಇದ್ದಾಗ ಆರೋಪಿ ಅಲ್ಲಿಗೆ ಹೋಗಿ ಬಡ್ಡಿ ಅಸಲು ಸೇರಿ ರೂ.**3** ಲಕ್ಷ ಹಣವನ್ನು ಈಗಲೇ ಕೊಡು ಅಂತ ಕೇಳಿದಳು ಎಂದರೆ ಸರಿಯಲ್ಲ. ರೂ.**3**ಲಕ್ಷ ಈಗಲೇ ಕೊಡಲು ಆಗದಿದ್ದರೆ ನೀನೂ ಸತ್ತರೆಷ್ಟು ಇದ್ದರೆಷ್ಟು ಅಂತ ಕೆಟ್ಟ ಶಬ್ದದಿಂದ ಬೈದಳು ಎಂದರೆ ಸರಿಯಲ್ಲ. ಆಗ ನಾನು ಪವಿತ್ರಾಕುಮಾರಿ ಬಳಿ ಹೋಗಿ ಸಮಾಧಾನ ಮಾಡಿದ್ದೆ ಎಂದರೆ ಸರಿಯಲ್ಲ. ಮೃತಳು ಬೇಜಾರು ಪಟ್ಟುಕೊಂಡು ಆ ಕಾರಣದಿಂದಲೇ ವಿಷ ಕುಡಿದು ದಿನಾಂಕ **11.06.2015**ರಂದು ತೀರಿಕೊಂಡಳು ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ಪೊಲೀಸರ ಮಂದೆ ನಿಪಿ-**11**ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಚೆನ್ನಾಗಿದ್ದೇವೆ. ಆ ಕಾರಣಕ್ಕಾಗಿ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದಃ- ಇಲ್ಲ

ಮರು ವಿಚಾರಣೆಃ- - ಇಲ್ಲ -

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**15.03.2023.**
[ ಜಿ.ಎಸ್. ಸಂಗ್ರೇಶಿ ]
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.